ಶ್ರೀ ಜಿ. ಎ. ತಿಮ್ಮಪ್ಪಗೌಡ.—ಯಾವಾಗ ಸ್ವಾಮಿ ಅದು ರೆಸ್ಪೋರ್ ಆಗಿದ್ದು ?

Sri Kadidal MANJAPPA.—I cannot give you the date.

ಶ್ರೀ ಜಿ. ಎ. ತಿಮ್ಮಪ್ಪಗೌಡ.—ನೂರಾರು ಎಕರೆಗೆ ನೀರು ಬರುವುದರಿಂದ ಇದನ್ನು ರಿಪೇರಿ ಮಾಡಿಸಲು ಪ್ರಯತ್ನಮಾಡುವಿರಾ ?

Sri Kadidal MANJAPPA.—Yes.

Arakere Branch Canal Work.

Q.—144. **Sri K. PUTTASWAMY** (Srirangapatna).—

Will the Government be pleased to state.—

(*a*) whether repeated representations were made to them by the people of Thadagavadi, Bettahalli, Narlakere, Chikkaharuvalli and Doddaharuvahalli villages of Arakere Hobli, Srirangapatna Taluk, urging the need for taking up the work of Arakere Branch Canal from Visvesvaraya Canal at Palhalli;

(*b*) the steps they have taken so far;

(*c*) whether it would not be possible to feed the tanks of those villages ?

A.—**Sri Kadidal MANJAPPA** (Minister for Revenue and Public Works).—

(*a*) Yes.

(*b*) The question was examined on more occasions than one and found to be comparatively costly.

(*c*) It depends on the availability of water after the atchkat in Visvesvaraya Canal area is fully developed.

ಶ್ರೀ ಕೆ. ಪುಟ್ಟಸ್ವಾಮಿ.—ಈ ಪ್ರಶ್ನೆಯನ್ನು ತಾವು ಎಷ್ಟು ಸಾರಿ ಎಗ್ಸಾಮಿನ್ ಮಾಡಿದ್ದೀರಿ ?

ಶ್ರೀ ಕಡಿದಾಳ್ ಮಂಜಪ್ಪ.—ನೋಟೀಸ್.

ಶ್ರೀ ಕೆ. ಪುಟ್ಟಸ್ವಾಮಿ.—Comparatively costly ಎಂದು ಉತ್ತರದಲ್ಲಿ ತಿಳಿಸಿದ್ದೀರಿ. ಇದಕ್ಕೆ ಎಷ್ಟು ಖರ್ಚಾಗುತ್ತದೆಂದು ಅಂದಾಜು ಮಾಡಿದ್ದೀರಿ ?

Sri Kadidal MANJAPPA.—The main difficulty is non-availability of water.

Sri K. PUTTASWAMY.—Does it mean that it is not comparatively costly Sir ?

Sri Kadidal MANJAPPA.—That is also one reason. The main reason for not taking up this project is non-availability of water.

ಶ್ರೀ ಕೆ. ಪುಟ್ಟಸ್ವಾಮಿ.—ಇದು ಬಹಳ costly ಆಗುತ್ತದೆಂದು ಹೇಳುವುದಾದರೆ ಅದು ಎಷ್ಟಾಗುತ್ತದೆಂಬುದನ್ನು ಹೇಳುವಿರಾ ?

ಶ್ರೀ ಕಡಿದಾಳ್ ಮಂಜಪ್ಪ.—ಈ ನಾಲೆ ರಿಪೇರಿಗೆ ಹೆಚ್ಚಿಗೆ ಖರ್ಚು ಬೇಕಾಗುತ್ತದೆಂದು ಇಲಾಖೆಯವರಿಂದ ವರದಿ ಬಂದಿದೆ.

ಶ್ರೀ ಕೆ. ಪುಟ್ಟಸ್ವಾಮಿ.—ಎಷ್ಟಾಗಬಹುದೆಂದು ತಿಳಿಸಿದ್ದಾರೆ ?

ಶ್ರೀ ಕಡಿದಾಳ್ ಮಂಜಪ್ಪ.—ಸುಮಾರು $2\frac{1}{2}$ ಲಕ್ಷ ರೂಪಾಯಿಗಳಿಗೆ ಸ್ವಲ್ಪ ಜಾಸ್ತಿಯಾಗಬಹುದೆಂದು ಹೇಳಿದ್ದಾರೆ.

ಶ್ರೀ ಕೆ. ಪುಟ್ಟಸ್ವಾಮಿ.—ಎಷ್ಟು ಎಕರೆ ಸಾಗುವಳಿಗೆ ಬರುತ್ತದೆ ?

ಶ್ರೀ ಕಡಿದಾಳ್ ಮಂಜಪ್ಪ.—ಸಧ್ಯಕ್ಕೆ ನಿಖರವಾದ ಅಂಕಿ ಅಂಶಗಳು ದೊರೆಯುವಂತಿಲ್ಲ.

ಶ್ರೀ ಕೆ. ಪುಟ್ಟಸ್ವಾಮಿ.—ಹಾಗೆ ಎಷ್ಟು ಎಕರೆ ತರಿಯಾಗುತ್ತದೆಂದು ಗೊತ್ತುಮಾಡಿಕೊಳ್ಳದೆಯೇ ಅದಕ್ಕೆ ಹೆಚ್ಚು ಖರ್ಚು ತಗಲುತ್ತದೆಂದು ಹೇಗೆ ಹೇಳುವುದು ?

ಶ್ರೀ ಕಡಿದಾಳ್ ಮಂಜಪ್ಪ.—ಅದನ್ನೆಲ್ಲಾ ಗೊತ್ತು ಮಾಡಿಯೇ ಹೇಳಿದ್ದಾರೆ. Only the figures are not available here.

ಶ್ರೀ ಕೆ. ಪುಟ್ಟಸ್ವಾಮಿ.—ಇದರಿಂದ ಅಲ್ಲಿನ ಕೆರೆಗಳಿಗೆ ನೀರನ್ನೊದಗಿಸುವುದಕ್ಕೆ ಸಾಧ್ಯವಾಗುವುದಿಲ್ಲವೇ ಎಂದು ಕೇಳಿದ್ದಕ್ಕೆ ವಿಶ್ವೇಶ್ವರಯ್ಯ ನಾಲಾ ಪೂರ್ತಿಯಾಗಿ develop ಮಾಡಿದ ಮೇಲೆ ನೋಡಬೇಕು ಎಂದು ಹೇಳಿದ್ದೀರಿ. ಇದೂ ವಿಶ್ವೇಶ್ವರಯ್ಯ ನಾಲಾದಲ್ಲಯೇ ಸೇರಿಲ್ಲವೇ ?

ಶ್ರೀ ಕಡಿದಾಳ್ ಮಂಜಪ್ಪ.—ಸೇರಿದೆ. ಆದರೆ ನೀರು ಸಾಕಾದಷ್ಟು ಬರುವುದಿಲ್ಲವೆಂದು ಹೇಳಿದ್ದಾರೆ. ಕಪಿನಿ ಯೋಜನೆ ಆದಮೇಲೆ ಇದನ್ನು ಯೋಚನೆಮಾಡಲಾಗುತ್ತದೆ.

ಶ್ರೀ ಕೆ. ಪುಟ್ಟಸ್ವಾಮಿ.—ಇದು ನಾಲೆಯ 18 ಮೈಲಿಯೊಳಗೇ ಇಲ್ಲವೇ ?

ಶ್ರೀ ಕಡಿದಾಳ್ ಮಂಜಪ್ಪ.—ಎಷ್ಟು ಮೈಲಿಯಲ್ಲಿದೆಯೆಂದು ಹೇಳುವುದಕ್ಕಾಗುವುದಿಲ್ಲ.

ಶ್ರೀ ಕೆ. ಪುಟ್ಟಸ್ವಾಮಿ.—ಈಗಾಗಲೇ ಅಲ್ಲಿಂದ ಇನ್ನೂ ಬಹುದೂರ ಮುಂದಕ್ಕೆ ನಾಲೆಯನ್ನು ತೆಗೆದುಕೊಂಡುಹೋಗಿಲ್ಲವೇ ?

ಶ್ರೀ ಕಡಿದಾಳ್ ಮಂಜಪ್ಪ.—ತೆಗೆದುಕೊಂಡು ಹೋಗಿರಬಹುದು.

ಶ್ರೀ ಕೆ. ಪುಟ್ಟಸ್ವಾಮಿ.—ಕೃಷ್ಣರಾಜಸಾಗರಕ್ಕೆ ಇನ್ನೂ ಬಹಳ ಹತ್ತಿರದಲ್ಲಿರುವ ಪ್ರದೇಶದಲ್ಲಿ ಈ ನೀರಿಲ್ಲವೇ ?

ಶ್ರೀ ಕಡಿದಾಳ್ ಮಂಜಪ್ಪ.—ಹತ್ತಿರ, ದೂರ ಎಂಬುದರ ಮೇಲೆ ಸಾಧ್ಯಾಸಾಧ್ಯತೆ ಅವಲಂಬಿಸುವುದಿಲ್ಲ.

ಶ್ರೀ ಕೆ. ಪುಟ್ಟಸ್ವಾಮಿ.—ಈ ಕೆರೆಗಳಿಗೆ ಈ ರೀತಿ ನೀರನ್ನೊದಗಿಸಬೇಕೆಂದು ನಿಮಗೆ ಅರ್ಜಿಗಳು ಬಂದಿಲ್ಲವೇ ?

ಶ್ರೀ ಕಡಿದಾಳ್ ಮಂಜಪ್ಪ.—ಬಂದಿವೆ.

ಶ್ರೀ ಕೆ. ಪುಟ್ಟಸ್ವಾಮಿ.—ಅವುಗಳ ಗತಿ ಏನಾಗಿದೆ ?

ಶ್ರೀ ಕಡಿದಾಳ್ ಮಂಜಪ್ಪ.—ಪರಿಶೀಲನೆಯಲ್ಲಿದೆ.

ಶ್ರೀ ಕೆ. ಪುಟ್ಟಸ್ವಾಮಿ.—ಅದಕ್ಕಾಗಿ ಒಂದು ಬ್ಯಾಂಟ್ ನಾಲಾ ಮಾಡಿ ಆ ಕೆರೆಗಳಿಗೆ ನೀರು ಕೂಟ್ಟರೆ ವ್ಯವಸಾಯಕ್ಕೆ ಬಹಳ ಅನುಕೂಲವಾಗುವುದಿಲ್ಲವೇ ?

ಶ್ರೀ ಕಡಿದಾಳ್ ಮಂಜಪ್ಪ.—ಅನುಕೂಲವಾಗುತ್ತದೆ. ಅದನ್ನು ಪರಿಶೀಲಿಸುತ್ತೇವೆ.

ಶ್ರೀ ಕೆ. ಪುಟ್ಟಸ್ವಾಮಿ.—ಈ ಸಂಬಂಧದಲ್ಲಿ ನೇಮಿಸಿದ್ದ ಕಮಿಟಿಯವರು ತಮ್ಮ ವರದಿಯನ್ನು ಒಪ್ಪಿಸಿಲ್ಲವೇ?

ಶ್ರೀ ಕಡಿದಾಳ್ ಮಂಜಪ್ಪ.—ವರದಿಮಾಡಿದ್ದಾರೆ.

ಶ್ರೀ ಕೆ. ಪುಟ್ಟಸ್ವಾಮಿ.—ಆ ವರದಿ ಬಂದಮೇಲೆ ಈ ವಿಚಾರದಲ್ಲಿ ಧರವಸೆ ಕೊಡುವುದಕ್ಕೆ ಸಾಧ್ಯವಿಲ್ಲವೇ ?

ಶ್ರೀ ಕಡಿದಾಳ್ ಮಂಜಪ್ಪ.—ರಿಪೋರ್ಟನ್ನು ನೋಡಿದಮೇಲೆ ಧರವಸೆ ಕೊಡಬಹುದು ಅಷ್ಟೆ. ಈಗಲೇ ಕೊಡುವುದಕ್ಕಾಗುವುದಿಲ್ಲ.

Maintenance of road from Harihar to Bangalore.

Q.—152. **Sri G. SIVAPPA** (Holalkere).—Will the Government be pleased to state :—

(*a*) whether the road from Harihar to Bangalore is maintained by the State;

(*b*) the amount provided for each mile of maintenance per year ?

A.—**Sri Kadidal MANJAPPA** (Minister for Revenue and Public Works).—

(*a*) Yes.

(*b*) Rs. 750 per mile.

ಶ್ರೀ ಜಿ. ಶಿವಪ್ಪ.—ಹರಿಹರದಿಂದ ಬೆಂಗಳೂರಿಗೆ ಎಷ್ಟು ದೂರ ಇದೆ?

Mr. SPEAKER.—That question need not be answered.

ಶ್ರೀ ಜಿ ಶಿವಪ್ಪ.—ಈ ರಸ್ತೆಯಲ್ಲಿ ಸಿಮೆಂಟ್ ರೋಡ್ ಬೇರೆಯಿದೆ, ಟಾರ್ ರೋಡ್ ಬೇರೆಯಿದೆ ಎಂಬುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಶ್ರೀ ಕಡಿದಾಳ್ ಮಂಜಪ್ಪ.—ಗೊತ್ತಿದೆ.

ಶ್ರೀ ಜಿ. ಶಿವಪ್ಪ.—ಸಿಮೆಂಟ್ ರಸ್ತೆ ಎಷ್ಟು ಮೈಲಿ ಟಾರ್ ರಸ್ತೆ ಎಷ್ಟು ಮೈಲಿಯಿದೆ ?

ಶ್ರೀ ಕಡಿದಾಳ್ ಮಂಜಪ್ಪ.—ನೋಟೀಸ್.

ಶ್ರೀ ಜಿ. ಶಿವಪ್ಪ.—ಸಿಮೆಂಟ್‌ರಸ್ತೆಗೂ ಟಾರ್ ರಸ್ತೆಗೂ maintenanceಗಾಗಿ ಬೇರೆ ಬೇರೆಯಾಗಿ ಹಣ ಕೊಡುತ್ತಿರೋ ಅಥವಾ ಒಟ್ಟಿಗೆ ಕೊಡುತ್ತೀರೋ?

ಶ್ರೀ ಕಡಿದಾಳ್ ಮಂಜಪ್ಪ.—ಬೇರೆ ಬೇರೆ ಕೊಡುತ್ತೇವೆ.

ಶ್ರೀ ಜಿ. ಶಿವಪ್ಪ.—ಹೆಚ್ಚು ಕಡಮೆ ಎಷ್ಟು ಕೊಡುತ್ತೀರಿ ?

ಶ್ರೀ ಕಡಿದಾಳ್ ಮಂಜಪ್ಪ.—ನೋಟೀಸ್.

ಶ್ರೀ ಜಿ. ಶಿವಪ್ಪ.—ಪ್ರತಿ ವರ್ಷವೂ ಕೊಡುತ್ತಿರುವ ಹಣ ಖರ್ಚುಮಾಡಬೇಕೆಂದು ಕೊಡುತ್ತಿದೆಯೇ ಅಥವಾ ಉಳಿತಾಯಮಾಡಬೇಕೆಂದು ಕೊಡುತ್ತಿದೆಯೇ ?

ಶ್ರೀ ಕಡಿದಾಳ್ ಮಂಜಪ್ಪ.—ಖರ್ಚುಮಾಡುವ ಅವಶ್ಯಕತೆಯಿದ್ದರೆ ಖರ್ಚುಮಾಡಬೇಕೆಂದೇ ಕೊಡುತ್ತೇವೆ.

ಶ್ರೀ ಜಿ. ಶಿವಪ್ಪ.—ಈಗ ಆ ರಸ್ತೆ ಯಾವ ರೀತಿ ಇದೆಯೆಂಬುದನ್ನೇನಾದರೂ ನೋಡಿದ್ದೀರಾ ?

ಶ್ರೀ ಕಡಿದಾಳ್ ಮಂಜಪ್ಪ.—ಸಾಧಾರಣಮಟ್ಟಿಗಿದೆಯೆಂದು ಗೊತ್ತಾಗಿದೆ.

ಶ್ರೀ ಜಿ. ಶಿವಪ್ಪ.—ಈ ರಸ್ತೆಯನ್ನು ಕೇಂದ್ರ ಸರ್ಕಾರಕ್ಕೆ ಹೈವೇ ಮಾಡುವ ದೃಷ್ಟಿಯಿಂದ Hand over ಮಾಡಬೇಕೆಂದೇನಾದರೂ proposals ಇವೆಯೇ ?

ಶ್ರೀ ಕಡಿದಾಳ್ ಮಂಜಪ್ಪ.—ಅದು correspondence ನಲ್ಲಿದೆ.

ಶ್ರೀ ಜೆ. ಮಹಮದ್ ಇಮಾಂ (ಜಗಳೂರು).—ಹರಿಹರದಿಂದ ಬೆಂಗಳೂರಿನವರೆಗೆ ಸಿಮೆಂಟ್ ಕಾಂಕ್ರೀಟ್ ರಸ್ತೆ ಮಾಡಬೇಕೆಂದು ಒಂದು proposal ಇರಲಿಲ್ಲವೇ ?

ಶ್ರೀ ಕಡಿದಾಳ್ ಮಂಜಪ್ಪ.—ಇತ್ತು.

ಶ್ರೀ ಜೆ. ಮಹಮದ್ ಇಮಾಂ.—ಹರಿಹರದಿಂದ ದಾವಣಗೆರೆವರೆಗೆ ಸಿಮೆಂಟ್ ಕಾಂಕ್ರೀಟ್ ಮಾಡಬೇಕೆಂದು ಜಲ್ಲಿಯನ್ನು ಶೇಖರಿಸಿದ್ದು ಸರ್ಕಾರದವರ ಗಮನದಲ್ಲಿದೆಯೇ ?

ಶ್ರೀ ಕಡಿದಾಳ್ ಮಂಜಪ್ಪ.—ನೋಟೀಸ್ ಬೇಕು.

ಶ್ರೀ ಜೆ. ಮಹಮದ್ ಇಮಾಂ.—ಈ ಪೂರ್ತ ರಸ್ತೆ ಬಹಳ ಮುಖ್ಯವಾದದ್ದಾಗಿರುವುದರಿಂದ ಮೈಸೂರು ಸರ್ಕಾರದವರು ತಾವೇ ಅಥವಾ ಕೇಂದ್ರ ಸರ್ಕಾರದ ಸಹಾಯದಿಂದಲೋ ಇದನ್ನು ಸಿಮೆಂಟ್ ಕಾಂಕ್ರೀಟ್ ಮಾಡಿದರೆ ಟ್ರಾಫಿಕ್ಕಿಗೆ ಬಹಳ ಅನುಕೂಲವಾಗುತ್ತದೆಂಬುದು ಗೊತ್ತಿದೆಯೇ ?

ಶ್ರೀ ಕಡಿದಾಳ್ ಮಂಜಪ್ಪ.—ಗೊತ್ತಿದೆ. ಆದರೆ ದುಡ್ಡಿನ ಅಭಾವದ ದೆಸೆಯಿಂದ ಸುಮ್ಮನಿದ್ದೇವೆ.

ಶ್ರೀ ಜೆ ಮಹಮದ್ ಇಮಾಂ.—ಈಗಿರುವ ಸ್ಥಿತಿಯಲ್ಲಿ ರಸ್ತೆ ಬಹಳ ಅನಮರ್ಪಕವಾಗಿದ್ದು ಬರುವ ಕಾರುಗಳ ಸ್ಪ್ರಿಂಗ್‌ಗಳು ಮುರಿಯುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಕಡಿದಾಳ್ ಮಂಜಪ್ಪ.—ಆ ರೀತಿ ಕೆಲವರ ಅನುಭವದಲ್ಲಿರಬಹುದು.

ಶ್ರೀ ಜೆ. ಮಹಮದ್ ಇಮಾಂ.—ಮೊನ್ನೆ ನಾನಿಲ್ಲಿಗೆ ಬರುತ್ತಿರುವಾಗ ಕಾರಿನ ಸ್ಪ್ರಿಂಗ್ ಮುರಿದು ಹೋಗಿದ್ದು ತಮ್ಮ ಗಮನಕ್ಕೆ ಬಂದಿದೆಯೇ ?

Sri Kadidal MANJAPPA.—I am very sorry to hear that.

ಶ್ರೀ ಜೆ. ಮಹಮದ್ ಇಮಾಂ.—ಈ ರಸ್ತೆಯನ್ನು ಒಳ್ಳೆಯ ಸ್ಥಿತಿಗೆ ತರುವುದಕ್ಕೆ ಸರ್ಕಾರದವರು ಏನು ಖರ್ಚು ಮಾಡಬೇಕಾಗುತ್ತದೆ ?

ಶ್ರೀ ಕಡಿದಾಳ್ ಮಂಜಪ್ಪ.—ಈಗಲೇ ಹೇಳುವುದಕ್ಕಾಗುವುದಿಲ್ಲ. ಮುಂದಿನ ವರ್ಷ ಒಂದು ಸಿಮೆಂಟ್ ಕಾಂಕ್ರೀಟ್ ಸ್ಕೀಮನ್ನು ಕೈಕೊಳ್ಳಬೇಕೆಂದಿದೆ. ಮುಂದಿನ ಸಾರಿ ಹಣಕಾಸಿನ ಪರಿಸ್ಥಿತಿ ಉತ್ತಮವಾದರೆ ಕೆಲವು ಮುಖ್ಯವಾದ ರಸ್ತೆಗಳನ್ನು ಸಿಮೆಂಟ್ ಕಾಂಕ್ರೀಟ್ ಮಾಡಬೇಕೆಂದು ಯೋಚನೆಮಾಡುತ್ತೇವೆ.

ಶ್ರೀ ಜೆ. ಮಹಮದ್ ಇಮಾಂ.—ಈಗ ಸಿಮೆಂಟ್ ಕಾಂಕ್ರೀಟನ್ನು ಸ್ವಲ್ಪಮಟ್ಟಿಗಾದರೂ ಮಾಡುವುದಕ್ಕೆ ಒಂದು ಸ್ಪೆಷಲ್ allotment ಮಾಡಲು ಸಾಧ್ಯವಿಲ್ಲವೇ?

Sri Kadidal MANJAPPA.—I will try.

Sri A. BHEEMAPPA NAIK (Molakalmuru).—How is it classified, Class A or B or C ?